ಚಿಕ್ಕೋಡಿ ತಾಲ್ಲೂಕಿನಲ್ಲಿರುವ ಆಯುರ್ವೇದ ಆಸ್ಪತ್ರೆಗಳ ಕುರಿತು

1534 (1806) ಶ್ರೀ ಕಟ್ಟೀಮನಿ ಮನೋಹರ ಶಿವಪುತ್ರ (ಚಿಕ್ಕೋಡಿ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕೋಡಿ ತಾಲ್ಲೂಕಿನಲ್ಲಿರುವ ಆಯುರ್ವೇದ ಆಸ್ಪತ್ರೆಗಳ ಸಂಖ್ಯೆ ಎಷ್ಟು; (ಪೂರ್ಣ ವಿವರ ನೀಡುವುದು)

ಆ) ಈ ಆಸ್ಪತ್ರೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಆಯುರ್ವೇದ ವೈದ್ಯರ ಸಂಖ್ಯೆ ಎಷ್ಟು?

ಡಾ|| ಎ.ಬಿ. ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಚಿಕ್ಕೋಡಿ ತಾಲ್ಲೂಕಿನಲ್ಲಿ ಎರಡು ಸರ್ಕಾರಿ ಆಯುರ್ವೇದ ಚಿಕಿತ್ಸಾಲಯಗಳಿದ್ದು, ಇವು ನೈಜ ಮತ್ತು ಮಜಲಟ್ಟಿ ಗ್ರಾಮಗಳಲ್ಲಿ ಕಾರ್ಯನಿರ್ವಹಿಸುತ್ತಿವೆ.

ಆ) ಮೇಲಿನ ಎರಡೂ ಚಿಕಿತ್ಸಾಲಯಗಳಲ್ಲಿ ತಲಾ ಒಬ್ಬರು ವೈದ್ಯರು ಕಾರ್ಯನಿರ್ವಹಿಸುತ್ತಿರುವರು.

ಅರೇಬಿಕ್ ಶಾಲೆಗಳ ಅನುದಾನ

1536 (1757) ಶ್ರೀ ಖಾದ್ರಿ ಎಸ್.ಎಸ್ (ಶಿಗ್ಗಾಂವ್) : ಮಾನ್ಯ ಪ್ರಾಥಮಿಕ ಮಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) 1997ನೇ ಸಾಲಿನಿಂದ ವೇತನ ಅನುದಾನವನ್ನು ಕೋರಿದ ಅರೇಬಿಕ್ ಶಾಲೆಗಳ ಸಂಖ್ಯೆ ಎಷ್ಟು?

ಆ) ಅವುಗಳ ಪೈಕಿ ಎಷ್ಟು ಶಾಲೆಗಳಿಗೆ ಸರ್ಕಾರ ಅನುದಾನವನ್ನು ಒದಗಿಸಿದೆ?

ಇ) ಇನ್ನೂ ಅನುದಾನ ಒದಗಿಸಬೇಕಾದ ಶಾಲೆಗಳ ಸಂಖ್ಯೆ ಎಷ್ಟು ?

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) 08

ಆ) 1997ರ ನಂತರ ಯಾವ ಶಾಲೆಗಳಿಗೂ ಅನುದಾನವನ್ನು ನೀಡಿರುವುದಿಲ್ಲ

ಇ) ಉದ್ಭವಿಸುವುದಿಲ್ಲ

ಪಿ.ಹೆಚ್.ಸಿ ಗಳಿಗೆ ಔಷಧಿ ಖರೀದಿಗೆ ಋಣ ಬಿಡುಗಡೆ

1537 (1758) ಶ್ರೀ ಎಸ್.ಎಸ್. ಖಾದ್ರಿ (ಶಿಗ್ಗಾಂವ್) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) 1999-2000ನೇ ಸಾಲಿನಲ್ಲಿ ಆಯವ್ಯಯದಲ್ಲಿ ಪಿ.ಹೆಚ್.ಸಿ.ಗಳಿಗೆ ಔಷಧಿಗಳನ್ನು ಮತ್ತು ಶಸ್ತ್ರಚಿಕಿತ್ಸೆ ಉಪಕರಣಗಳನ್ನು ಖರೀದಿಸಲು ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ.